

## ಮರದಲ್ಲಿ ಅರಳಿದ ಕಲೆ

ಹುಲಿಯೊಂದು ಚಂಗನೆ ಹಾರಿಬರುವಂತಿರುವ ಚಿತ್ರವೊಂದು ದಾರಿಹೋಕರನ್ನು ತನ್ನತ್ತ ಸೆಳೆಯುತ್ತದೆ. ಕೊಡಗಿನ ಕೂಡಿಗೆಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿನ ಮರವೊಂದರ ಮೇಲೆ ಕಲಾವಿದರೊಬ್ಬರು ಈ ಚಿತ್ರವನ್ನು ರಚಿಸಿದ್ದಾರೆ. ಕಾಡು ನಮ್ಮೆಲ್ಲರ ಉಸಿರು ಹಾಗೆಯೇ ಪ್ರಾಣಿಗಳ ವಾಸಸ್ಥಾನವೂ ಹೌದು. ಒಂದೊಮ್ಮೆ ಕಾಡುಗಳು ನಶಿಸಿ ಹೋದರೆ ಕಾಡಿನಲ್ಲಿರುವ ಪ್ರಾಣಿಗಳು ನಾಡಿಗೆ ಕಾಲಿಡುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿ ಕಾಡಿನ ರಕ್ಷಣೆ ನಮ್ಮೆಲ್ಲರ ಹೊಣೆ. ಕಾಡು ಮತ್ತು ಪ್ರಾಣಿಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅಂದಹಾಗೆ ನಮ್ಮ ಭವಿಷ್ಯದ ಅಳಿವು ಉಳಿವಿನ ಪ್ರಶ್ನೆಯಾಗಿಯೂ ಕಾಡುಗಳು ಪಾತ್ರವನ್ನು ನಿರ್ವಹಿಸುತ್ತಿವೆ ಎಂಬ ಮಾತುಗಳನ್ನು ಮನದಲ್ಲಿ ಮೂಡಿಸುವ ಕಲಾವಿದನ ಚಿತ್ರಕ್ಕೊಂದು ನಮನ.

—ಸಿದ್ದೇಶ್ ಸಣ್ಣಗಿರಿ ಕೊಟ್ಟೂರು, ಮಡಿಕೇರಿ





## ಬಾಳೆಕಂದು ಸ್ಟ್ಯಾಂಡ್

ಈ ಚಿತ್ರ ವರಲಕ್ಷ್ಮಿ ಪೂಜೆಯ ದಿನ ಗೆಳತಿಯ ಮನೆಯಲ್ಲಿ ಕಂಡುಬಂತು. ಬಾಳೆ ಕಂದುಗಳನ್ನು ಇಡಲು ತಯಾರಿಸಿದ ಸ್ಟ್ಯಾಂಡ್ ಇದಾಗಿದ್ದು, ನೋಡಲು ಅತ್ಯಾಕರ್ಷಕವಾಗಿದೆ. ಒಂದು ಜೊತೆ ಸ್ಟ್ಯಾಂಡ್ ತಯಾರಿಸಿಕೊಂಡರೆ, ಪ್ರತೀಬಾರಿ ಪೂಜೆಯ ಸಮಯದಲ್ಲಿ, ಬಾಳೆ ಕಂದುಗಳನ್ನು ನಿಲ್ಲಿಸುವ ಶ್ರಮಕ್ಕೆ ಇತಿಶ್ರೀ ಹಾಡಬಹುದು. ಬೆಂಗಳೂರಿನ ರೂಪಶ್ರೀ ಹೆಬ್ಬಾಲೆ ಅವರು ಇಂಥ ಹಲವಾರು ಅಲಂಕಾರಿಕ ವಸ್ತುಗಳನ್ನು ಕಲಾತ್ಮಕವಾಗಿ ತಯಾರಿಸುವುದರಲ್ಲಿ ಸಿದ್ಧಹಸ್ತರು.

—ವೀಣಾ ಜೋಶಿ, ಬಾರ್ಕೂರು, ಉಡುಪಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.

ಇಮೇಲ್ ವಿಳಾಸ: editorsu@sudha.co.in